# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 754 |
| ಸದಸ್ಯರ ಹೆಸರು | : | ಡಾ|| ಎಂ.ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತು ಸರ್ಕಾರವು ಯಾವುದಾದರೂ ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿದೆಯೇ; (ಸಂಪೂರ್ಣ ವಿವರ ನೀಡುವುದು) | ಬೀದರ್ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ಕೈಗಾರಿಕಾ ನೀತಿ 2025-30ನ್ನು ಜಾರಿಗೆ ತಂದಿದ್ದು, ಇದರ ಹೊರತಾಗಿ ವಿಶೇಷ ಯೋಜನೆ ಇರುವುದಿಲ್ಲ.<br><br>ಬೀದರ್ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ವಿವಿಧ ತಾಲ್ಲೂಕುಗಳಲ್ಲಿ ಒಟ್ಟು 9 ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ ಒಟ್ಟು 105 ಮಳಿಗೆಗಳು ಮತ್ತು 423 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.<br><br>ಕೈಗಾರಿಕಾ ಅಭಿವೃದ್ಧಿಯಲ್ಲಿ ಹೆಚ್ಚು ಹಿಂದುಳಿದಿರುವುದನ್ನು ಆಧರಿಸಿ ಬೀದರ್ ಜಿಲ್ಲೆಯನ್ನು ಕೈಗಾರಿಕಾ ನೀತಿ 2025-30 ರಲ್ಲಿ ವಲಯ–1 ರಲ್ಲಿ ಸೇರಿಸಲಾಗಿದ್ದು, ಸದರಿ ಜಿಲ್ಲೆಗೆ ನೀಡಲಾಗುತ್ತಿರುವ ರಿಯಾಯಿತಿ & ಪ್ರೋತ್ಸಾಹನೆಗಳ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.<br><br>ಇತರೆ ವಲಯಗಳಿಗೆ ಹೋಲಿಸಿದರೆ, ವಲಯ-1 ರಲ್ಲಿ ಸೂಕ್ಷ್ಮ ಕೈಗಾರಿಕೆಗಳಿಗೆ ಒಟ್ಟು ಸ್ಥಿರಾಸ್ತಿ ಮೌಲ್ಯದ 5%ದಷ್ಟು ಹೆಚ್ಚುವರಿ ಸಬ್ಸಿಡಿ (ಗರಿಷ್ಟ ರೂ. 5 ಲಕ್ಷ) ಮತ್ತು ಸಣ್ಣ ಕೈಗಾರಿಕೆಗಳಿಗೆ ಒಟ್ಟು ಸ್ಥಿರಾಸ್ತಿ ಮೌಲ್ಯದ 5%ದಷ್ಟು ಹೆಚ್ಚುವರಿ ಸಬ್ಸಿಡಿ (ಗರಿಷ್ಟ ರೂ. 10 ಲಕ್ಷ) ನೀಡಲಾಗುತ್ತಿದೆ. ಕೈಗಾರಿಕಾ ನೀತಿಯ ಪ್ರಕಾರ ಕೆಳಕಂಡ ರಿಯಾಯಿತಿ & ಪ್ರೋತ್ಸಾಹಗಳನ್ನು ನೀಡಲಾಗುವುದು.<br><br>1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ. |

| | | |
|---|---|---|
| | | 2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ.<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.<br>5. ವಿದ್ಯುತ್ ಚ್ಛಕ್ತಿ ಸಹಾಯಧನ.<br>6. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ<br>7. ರಫ್ತು ಘಟಕಗಳಿಗೆ ಪ್ರೋತ್ಸಾಹ.<br>8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ ಉತ್ತೇಜನ<br>9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ<br><br>**ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆ (ಪಿ.ಎಂ.ಇ.ಜಿ.ಪಿ)**<br><br>ರಾಜ್ಯದಲ್ಲಿ ಯುವಕರು ಸಣ್ಣ ಕೈಗಾರಿಕೆಯನ್ನು ಸ್ಥಾಪಿಸುವಂತೆ ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆಯನ್ನು (ಪಿ.ಎಂ.ಇ.ಜಿ.ಪಿ) 2008-09 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯನ್ನು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳ ವತಿಯಿಂದ ಅನುಷ್ಠಾನ ಮಾಡಲಾಗುತ್ತಿದೆ.<br><br>ಸದರಿ ಯೋಜನೆಯಡಿ ನಿರುದ್ಯೋಗಿಗಳಿಗೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು, ಉದ್ಯೋಗವಕಾಶ ಕಲ್ಪಿಸುವ ದೃಷ್ಟಿಯಿಂದ, ಉತ್ಪಾದನೆ ಚಟುವಟಿಕೆಗೆ ರೂ.50.00 ಲಕ್ಷಗಳ ಯೋಜನಾ ವೆಚ್ಚದವರೆಗೂ ಮತ್ತು ಸೇವಾ ಚಟುವಟಿಕೆಗೆ ರೂ.20.00 ಲಕ್ಷಗಳ ಯೋಜನಾ ವೆಚ್ಚದವರೆಗೂ ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಈ ಕೆಳಗಿನಂತೆ ಸಹಾಯಧನವನ್ನು ನೀಡಲಾಗುತ್ತದೆ. |

| ವರ್ಗ | ನಗರ | ಗ್ರಾಮೀಣ |
|---|---|---|
| ಸಾಮಾನ್ಯ ವರ್ಗದವರಿಗೆ | 15% | 25% |
| ಪ.ಜಾ, ಪ.ಪಂ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ, ಮಾಜಿ ಸೈನಿಕ, ಅಂಗವಿಕಲ, ಮಹಿಳೆ | 25% | 35% |

| | | |
|---|---|---|
| | | **ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉದ್ದಿಮೆದಾರರಿಂದ ಸ್ಥಾಪಿಸಲಾಗುವ ಸಣ್ಣ ಮತ್ತು ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಯೋಜನೆ/ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.**<br><br>1. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:<br>ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಹೊಸ ಘಟಕ ಸ್ಥಾಪಿಸುವ ಮೊದಲ ಪೀಳಿಗೆ ಉದ್ದಿಮೆದಾರಿಗೆ ಯೋಜನಾ ವೆಚ್ಚದಲ್ಲಿ Debt Equity ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br>ವಿಸ್ತರಣೆ/ಆಧುನೀಕರಣ/ಚಟುವಟಿಕೆ ಬದಲಾವಣೆ ಹೊಂದಿದ ಉದ್ಯಮಗಳು ಅರ್ಹವಿರುತ್ತದೆ.<br><br>ಯಂತ್ರೋಪಕರಣಗಳ ಮೇಲೆ ರೂ.10.00 ಕೋಟಿ ಹೂಡಿಕೆ ಮಾಡಿರುವ ಘಟಕಗಳು ಗರಿಷ್ಟ ರೂ.75.00 ಲಕ್ಷಗಳ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ. ಮಂಜೂರಾತಿ ಸಮಿತಿ ಸಭೆಯಲ್ಲಿ ವಿವರವಾದ ಪರಿಶೀಲನೆಯ ನಂತರ ಪರಿಶೀಲನಾ ಸಮಿತಿ ಶಿಫಾರಸು ಮಾಡಿದ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯವನ್ನು ಮಂಜೂರು ಮಾಡಲಾಗುತ್ತಿದೆ.<br><br>2. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ.<br><br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ |

| | | |
|---|---|---|
| | | ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಗರಿಷ್ಟ 2 ಎಕರೆ ಕೈಗಾರಿಕಾ ನಿವೇಶನ/ಪ್ಲಾಟ್ ಗಳಿಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>3. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.<br><br>• ಪ್ರವರ್ತಕರ ಬಂಡವಾಳ ಯೋಜನಾ ವೆಚ್ಚದ ಶೇ.10<br><br>ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಸಾಲ ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00 ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ<br><br>4. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿ. |

<table>
<tr><td></td><td></td><td>ದಿನಾಂಕ:01/04/2017ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸರ್ಕಾರದ ವತಿಯಿಂದ ಮರುಪಾವತಿಸಲಾಗುತ್ತಿದೆ.<br><br>5. ವಿದ್ಯುಚ್ಛಕ್ತಿ ಸಹಾಯಧನ:<br>ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01/04/2017ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ ರೂ.2ರಂತೆ ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ 6% ಬಡ್ಡಿ ಸಹಾಯಧನ ಯೋಜನೆ</td></tr>
<tr><td>ಆ)</td><td>ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಣ್ಣ ಪ್ರಮಾಣ ಕೈಗಾರಿಕೆಗಳ ಸಂಖ್ಯೆ ಎಷ್ಟು ಮತ್ತು ಕಳೆದ ಮೂರು ವರ್ಷಗಳಲ್ಲಿ ಮುಚ್ಚಿಹೋಗಿರುವ ಘಟಕಗಳೆಷ್ಟು; ಇವುಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ರಾಜ್ಯದಲ್ಲಿ ಜುಲೈ 2020 ರಿಂದ ಎಂ ಎಸ್ ಎಂ ಇ ಉದ್ಯಮಗಳ ನೋಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದೆ.<br><br>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಬೀದರ್ ಜಿಲ್ಲೆಯಲ್ಲಿ ನೋಂದಣಿಯಾದ ಒಟ್ಟು ಸಣ್ಣ ಪ್ರಮಾಣ ಕೈಗಾರಿಕೆಗಳ ಸಂಖ್ಯೆ ಈ ಕೆಳಕಂಡಂತಿದೆ. (ಜನವರಿ 2026 ರ ಅಂತ್ಯಕ್ಕೆ)<br><table><tr><th>ಸೂಕ್ಷ್ಮ</th><th>ಸಣ್ಣ</th><th>ಮಧ್ಯಮ</th><th>ಒಟ್ಟು</th></tr><tr><td>48065</td><td>333</td><td>19</td><td>48417</td></tr></table><br>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನೊಂದಣಿಯಾಗಿರುವ ಉದ್ಯಮಗಳ ವಿವರಗಳು ಮಾತ್ರ ಲಭ್ಯವಿರುತ್ತದೆ. ಆದರೆ, ಮುಚ್ಚಿಹೋಗಿರುವ ಸಣ್ಣ ಕೈಗಾರಿಕಾ ಘಟಕಗಳ ಬಗ್ಗೆ ಮಾಹಿತಿ ಪಡೆಯುವ ವ್ಯವಸ್ಥೆಯು ಇಲಾಖೆಯಲ್ಲಿ ಇರುವುದಿಲ್ಲ. ಹಾಗೂ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಭಾರತೀಯ ರಿಸರ್ವ್</td></tr>
</table>

| | | |
|---|---|---|
| | | ಬ್ಯಾಂಕ್ ಮಾರ್ಗಸೂಚಿಯಂತೆ ಬ್ಯಾಂಕುಗಳು ಕ್ರಮ ವಹಿಸಬೇಕಿರುತ್ತದೆ. |
| ಇ) | ಬೀದರ್ ಜಿಲ್ಲೆಯು ಜವಳಿ ಮತ್ತು ಕೃಷಿ ಆಧಾರಿತ ಉದ್ದಿಮೆಗಳಿಗೆ ಪೂರಕವಾಗಿದ್ದು ಕೇಂದ್ರ ಸರ್ಕಾರದ ಮಿತ್ರ (MITRA) ಅಥವಾ ರಾಜ್ಯದ ಜವಳಿ ನೀತಿಯಡಿ ಈ ಭಾಗಕ್ಕೆ ಒದಗಿಸಲಾದ ತಾಂತ್ರಿಕ ಮತ್ತು ಆರ್ಥಿಕ ನೆರವು ಎಷ್ಟು; | ಬೀದರ್ ಜಿಲ್ಲೆಯಲ್ಲಿ PM-MITRA ಯೋಜನೆಯಡಿ ಪಾರ್ಕ್ ಸ್ಥಾಪನೆ ಪ್ರಸ್ತಾವನೆ ಇರುವುದಿಲ್ಲ. ಆದರೆ, ಕೇಂದ್ರ ಸರ್ಕಾರದ Prime Minister's Mega Integrated Textile Region and Apparel Park (PM-MITRA) ಯೋಜನೆಯಡಿ ರಾಜ್ಯದ ಕಲಬುರಗಿ ಜಿಲ್ಲೆಯ ನದಿಸಿನ್ನೂರು ಮತ್ತು ಕಿರಣಗಿ ಪ್ರದೇಶದ 1000 ಎಕರೆ ವಿಸ್ತೀರ್ಣದಲ್ಲಿ ಪಾರ್ಕ್ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಪ್ರಗತಿಯಲ್ಲಿರುತ್ತದೆ.<br><br>ಕಳೆದ 3 ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವುದೇ ಜವಳಿ ಘಟಕಗಳು ರಾಜ್ಯದ ಜವಳಿ ನೀತಿಯಡಿ ಆರ್ಥಿಕ ನೆರವು ಪಡೆದಿರುವುದಿಲ್ಲ. |
| ಈ) | ಎಂಜಿನಿಯರ್ ಗಳ ದಿನಾಚರಣೆಯ ಸಂದರ್ಭದಲ್ಲಿ ವ್ಯಕ್ತವಾದ ಬೇಡಿಕೆಯಂತೆ ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಸ್ಥಳೀಯ ಎಂಜಿನಿಯರಿಂಗ್ ಪದವೀಧರರಿಗೆ ಉದ್ಯೋಗ ನೀಡಲು ಮತ್ತು ಗ್ರಾಮೀಣ ಮೂಲ ಸೌಕರ್ಯ ಬಲಪಡಿಸಲು ಸರ್ಕಾರವು ಕೈಗೊಂಡಿರುವ ನಿರ್ದಿಷ್ಟ ಉಪಕ್ರಮಗಳೇನು? | ಉದ್ಯಮಶೀಲರು ಕೈಗಾರಿಕೆಗಳನ್ನು ಸ್ಥಾಪಿಸಲು ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅವುಗಳಲ್ಲಿ ಪ್ರಮುಖವಾಗಿ ಕೈಗಾರಿಕಾ ನೀತಿ 2025-30, ಪಿ ಎಂ ಇ ಜಿ ಪಿ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿಯಲ್ಲಿ ವಿವಿಧ ಸೌಲಭ್ಯಗಳು ಮತ್ತು ಕೆ ಎಸ್ ಎಫ್ ಸಿ ವತಿಯಿಂದ ಶೇ 6 ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>ಭಾರತ ಸರ್ಕಾರದ Raising and Accelerating MSME Performance (RAMP) ಯೋಜನೆಯಡಿ ಬೀದರ್ ಜಿಲ್ಲೆಯ ಗುರುನಾನಕ ಇಂಜಿನಿಯರಿಂಗ್ ಕಾಲೇಜ್ ಹಾಗೂ ಲಿಂಗರಾಜಪ್ಪಾ ಅಪ್ಪಾ ಕಾಲೇಜ್ ನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ಸುಮಾರು 200 ವಿದ್ಯಾರ್ಥಿಗಳಿಗೆ ನಾವೀನ್ಯತೆ (Innovation) ಆಧಾರಿತ Incubation Awareness workshop ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.<br><br>ಜಾಗರಿ ಉತ್ಪಾದಕರಿಗೆ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಾವೀನ್ಯತೆ ಹೊಂದಿದ ಉಪಕರಣ ಮತ್ತು ಉತ್ಪಾದನೆ ಕುರಿತು ಎರಡು ದಿನಗಳ 'ತಾಂತ್ರಿಕ ಕ್ಲಿನಿಕ್' |

| | | |
|---|---|---|
| | | (ಜಾಗರಿ ಕ್ಲಸ್ಟರ್) ತರಬೇತಿ ಕಾರ್ಯಕ್ರಮವನ್ನು 110 ಪ್ರತಿನಿಧಿಗಳಿಗೆ ನಡೆಸಲಾಗಿದೆ.<br>ಕೈಗಾರಿಕೆಗಳನ್ನು ಸ್ಥಾಪಿಸಲು ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಕೈಗಾರಿಕಾ ಪ್ರದೇಶಗಳನ್ನು ಕೆಐಎಡಿಬಿ ಮತ್ತು ಕೆ ಎಸ್ ಎಸ್ ಐ ಡಿ ಸಿ ವತಿಯಿಂದ ಕೈಗೊಳ್ಳಲಾಗುತ್ತಿದೆ. |

ಸಿಐ 90 ಸಿಎಸ್‌ಸಿ 2026

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.

ಅನುಬಂಧ - 1

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಬೀದರ್ ಜಿಲ್ಲೆಯಲ್ಲಿ ನಿಗಮದ ವತಿಯಿಂದ ಸ್ಥಾಪಿಸಲಾಗಿರುವ ಕೈಗಾರಿಕಾ ವಸಾಹತುಗಳ ತಾಲ್ಲೂಕುವಾರು ವಿವರ**

| ಕ್ರ.ಸಂ | ತಾಲ್ಲೂಕು | ಕೈಗಾರಿಕಾ ವಸಾಹತುವಿನ ಹೆಸರು | ಸ್ಥಾಪನಾ ವರ್ಷ | ವಿಸ್ತೀರ್ಣ ಎಕರೆಗಳಲ್ಲಿ | ನಿರ್ಮಿಸಿರುವ ಮಳಿಗೆಗಳ ಸಂಖ್ಯೆ | ಹಂಚಿಕೆ | ಖಾಲಿ | ಅಭಿವೃದ್ಧಿಪಡಿಸಿರುವ ನಿವೇಶನಗಳ ಸಂಖ್ಯೆ | ಹಂಚಿಕೆ | ಖಾಲಿ |
|---|---|---|---|---|---|---|---|---|---|---|
| 1 | ಬೀದರ್ | ಬಾಲ್ಕಿ | 1984 | 3.85 | 8 | 8 | 0 | 9 | 9 | 0 |
| 2 | ಬೀದರ್ | ಗಾಂಧಿಗಂಜ್ | 1969 | 11.2 | 22 | 22 | 0 | 61 | 61 | 0 |
| 3 | ಬೀದರ್ | ಕೋಲ್ಹಾರ್ | 1992 | 30.00 | 9 | 9 | 0 | 121 | 120 | 1 |
| 4 | ಬೀದರ್ | ನವಬಾದ್ | 1981 | 10.00 | 36 | 36 | 0 | 62 | 62 | 0 |
| 5 | ಚಿಟಗುಪ್ಪ | ಚಿಟಗುಪ್ಪ | 1984 | 4.00 | 0 | 0 | 0 | 0 | 0 | 0 |
| 6 | ಹುಮ್ನಾಬಾದ್ | ಹುಮ್ನಾಬಾದ್-1ನೇ ಹಂತ | 1985 | 4.50 | 22 | 22 | 0 | 30 | 30 | 0 |
| 7 | ಹುಮ್ನಾಬಾದ್ | ಹುಮ್ನಾಬಾದ್-2ನೇ ಹಂತ | 2010 | 22.57 | 8 | 8 | 0 | 95 | 88 | 7 |
| 8 | ತಾನಕುಶನೂರು | ತಾನಕುಶನೂರು | 1985 | 2.00 | 0 | 0 | 0 | 13 | 13 | 0 |
| 9 | ಬಸವಕಲ್ಯಾಣ | ಬಸವಕಲ್ಯಾಣ | 2007 | 5.00 | 0 | 0 | 0 | 32 | 32 | 0 |
| | | **ಒಟ್ಟು** | | **93.12** | **105** | **105** | **0** | **423** | **415** | **8** |

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ - 2

# ಕೈಗಾರಿಕಾ ನೀತಿ 2025-30

ಕರ್ನಾಟಕ ಸರ್ಕಾರವು 08.02.2025 ರಿಂದ ಹೊಸ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿದ್ದು, ಇದರಡಿಯಲ್ಲಿ ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ, ಹಾಲಿ ಇರುವ ಕೈಗಾರಿಕೆಯ ವಿಸ್ತರಣೆಗಾಗಿ/ ಆಧುನೀಕರಣಕ್ಕಾಗಿ/ ವೈವಿಧ್ಯೀಕರಣಕ್ಕಾಗಿ ಬಂಡವಾಳ ಹೂಡುವ ಎಂ.ಎಸ್.ಎಂ.ಇ ಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯುತ್ತವೆ.

**ಬೀದರ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳನ್ನು ವಲಯ -1 ರಲ್ಲಿ ವರ್ಗೀಕರಿಸಿ ಹೆಚ್ಚಿನ ಉತ್ತೇಜನವನ್ನು ಕಲ್ಪಿಸಲಾಗಿದೆ.**

| ಸಾಮಾನ್ಯ ಪ್ರವರ್ಗ | | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪ ಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು) |
|---|---|---|
| **1. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ** | | |
| ವಿವರ | ವಲಯ-1 | ವಲಯ-1 |
| ಸೂಕ್ಷ್ಮ ಕೈಗಾರಿಕೆಗಳು | 30% ವಿ.ಎಫ್.ಎ (ಗರಿಷ್ಟ ರೂ.30ಲಕ್ಷ) | 35% ವಿ.ಎಫ್.ಎ (ಗರಿಷ್ಟ ರೂ.35 ಲಕ್ಷ) |
| ಸಣ್ಣ ಕೈಗಾರಿಕೆಗಳು | 25% ವಿ.ಎಫ್.ಎ (ಗರಿಷ್ಟ ರೂ.200 ಲಕ್ಷ) | 30% ವಿ.ಎಫ್.ಎ (ಗರಿಷ್ಟ ರೂ.225 ಲಕ್ಷ) |

ಟಿಪ್ಪಣಿ: ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನವನ್ನು ಎರಡು ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು.

ವಿ.ಎಫ್.ಎ: ವ್ಯಾಲ್ಯು ಆಫ್ ಫಿಕ್ಸೆಡ್ ಅಸೆಟ್ಸ್

ಮಧ್ಯಮ ಕೈಗಾರಿಕೆಗಳು : ಹೂಡಿಕೆ ಉತ್ತೇಜನಾ ಸಹಾಯಧನದ ಕುರಿತು ಎರಡು ಆಯ್ಕೆಗಳನ್ನು ಕಲ್ಪಿಸಲಾಗಿರುತ್ತದೆ.

| ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ | | ಮಧ್ಯಮ ಕೈಗಾರಿಕೆಗಳಿಗೆ ಉತ್ಪಾದನಾ ಆಧಾರಿತ ಸಹಾಯಧನ |
|---|---|---|
| ಹೂಡಿಕೆ ಉತ್ತೇಜನಾ ಸಹಾಯಧನ ಘಟಕವು ಉತ್ಪಾದನೆ ಪ್ರಾರಂಭಿಸಿದ ನಂತರ 4 ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು | | ಘಟಕದ ಉತ್ಪಾದನೆಯ ಆಧಾರದಲ್ಲಿ ಗರಿಷ್ಟ 7 ವರ್ಷ |
| ವಲಯ-1 | 25% ವಿ.ಎಫ್.ಎ (ಗರಿಷ್ಟ ರೂ.10 ಕೋಟಿ) | 2.5% ನಿವ್ವಳ ಉತ್ಪಾದನೆ (ಗರಿಷ್ಟ ಶೇ.60 ವಿ.ಎಫ್.ಎ) |

**ಟಿಪ್ಪಣಿ: ಡಾ ನಂಜುಂಡಪ್ಪ ವರದಿಯ ಅನ್ವಯ ಹೆಚ್ಚುವರಿ ಉತ್ತೇಜನಾ ಸಹಾಯಧನವನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ**

| | | |
|---|---|---|
| ಸೂಕ್ಷ್ಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಟ ರೂ.5ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.3ಲಕ್ಷ) |
| ಸಣ್ಣ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಟ ರೂ.10ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.5ಲಕ್ಷ) |
| ಮಧ್ಯಮ ಕೈಗಾರಿಕೆಗಳು | ಅತ್ಯಂತ ಹಿಂದುಳಿದ ತಾಲ್ಲೂಕು | 5% ವಿ.ಎಫ್.ಎ (ಗರಿಷ್ಟ ರೂ.50ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.25 ಲಕ್ಷ) |
| ಮಧ್ಯಮ ಕೈಗಾರಿಕೆಗಳು (ಉತ್ಪಾದನಾ ಆಧಾರಿತ) | ಅತ್ಯಂತ ಹಿಂದುಳಿದ ತಾಲ್ಲುಕು | ಗರಿಷ್ಟ 5% ವಿ.ಎಫ್.ಎ |
| | ಹಿಂದುಳಿದ ತಾಲ್ಲೂಕು | ಗರಿಷ್ಟ 3% ವಿ.ಎಫ್.ಎ |

ಬಂಡವಾಳ ಹೂಡಿಕೆ ಸಹಾಯಧನವನ್ನು ಉದ್ಯಮಶೀಲರು ಹೂಡುವ ನಿವೇಶನ, ಕಟ್ಟಡ, ಯಂತ್ರೋಪಕರಣ ಇವುಗಳನ್ನು ಸ್ಥಿರಾಸ್ತಿ (ವಿ.ಎಂ ಎ) ಎಂದು ಪರಿಗಣಿಸಿ ಇದರ ಶೇಕಡಾವಾರು ನೀಡಲಾಗುವುದು.

**2. ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:**

ಅರ್ಹತೆ

1.ರಾಜ್ಯ ಹಣಕಾಸು ನಿಗಮ,
2.ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,
3.ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು,
4.ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ,
5.ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್),
6.ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ,
7.ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ

ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.

ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು

1.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,
2.ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ,
3.ಕಿಯಾನಿಕ್ಸ್,
4.ಕೈಗಾರಿಕಾ ಸಹಕಾರ ಸಂಘಗಳು,
5.ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ ಪಾರ್ಕ್‌ಗಳು,
6.ಆಹಾರ ಪಾರ್ಕ್‌ಗಳು,
7.ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ (ಎಸ್/ಪಿ.ವಿ) ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ (ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಲಾಗುತ್ತದೆ.

| | |
|---|---|
| **2.ಅ ಎಂಎಸ್‌ಎಂಇ ಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ** | |
| ವಲಯ 1 : 100% | ವಲಯ 1 : 100% |
| ದುಡಿಮೆ ಬಂಡವಾಳಕ್ಕೆ ಸ್ಟಾಂಪ್ ಶುಲ್ಕವನ್ನು ಉತ್ಪಾದನೆ ಪ್ರಾರಂಭಿಸಿದೆ 3 ವರ್ಷಗಳಲ್ಲಿ ಮಾತ್ರ ಕಲ್ಪಿಸಲಾಗಿದೆ. | |
| **2.ಆ ಎಂಎಸ್‌ಎಂಇ ಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ವಲಯ 1 : ರೂ.1000/-ಕ್ಕೆ ರೂ.1/- | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| **3. ಎಂಎಸ್‌ಎಂಇ ಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ** | |
| ವಲಯ 1 : 100% | ವಲಯ 1 : 100% |
| **4. ಎಂಎಸ್‌ಎಂಇ ಗಳಿಗೆ ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ** | |
| ವಲಯ 1 : 100% 7 ವರ್ಷದವರೆಗೆ | ವಲಯ 1 : 100% 8 ವರ್ಷದವರೆಗೆ |
| **5. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ** | |
| ವಲಯ 1 ಮತ್ತು 2 ಕ್ಕೆ ಮಾತ್ರ: ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿ ವರಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | |
| **6. ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ** | |
| **ಎಲ್ಲಾ ವಲಯಗಳಿಗೆ**<br>ಐಎಸ್‌ಓ ಸರಣಿ ಪ್ರಮಾಣೀಕರಣ<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್ (ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)<br>ಎಫ್.ಎಸ್.ಎಸ್.ಎ.ಐ- ಅಗ್ಮಾರ್ಕ್<br>ಎಕೋಮಾರ್ಕ<br>ಝಿರೊ ಡಿಫೇಕ್ಟ ಝಿರೋ ಎಫೆಕ್ಟ (ಝಡ್)<br>ಐ.ಎಸ್.ಐ<br>ಫ್ರೂಟ್ ಪ್ರಾಡಕ್ಟ್ ಆರ್ಡರ್ (ಎಫ್.ಪಿ.ಓ)<br>ಬ್ಯೂರೋ ಆಫ್ ಎನರ್ಜಿ ಎಫೀಸಿಯೆನ್ಸಿ (ಬಿ.ಇ.ಇ)<br>ಯಾವುದೇ ಅಂತರಾಷ್ಟ್ರೀಯ ಕ್ವಾಲಿಟಿ ಸರ್ಟಿಫಿಕೇಷನ್ ಭಾರತ ದೇಶ ಅಂಗೀಕರಿಸಿದ ಸರ್ಟಿಫಿಕೇಟ್ ಗಳು | ಒಟ್ಟು ಅರ್ಜಿಯ ಮೊತ್ತದ ಶೇ 50 ( ಗರಿಷ್ಠ ಮೊತ್ತ ರೂ.5.00 ಲಕ್ಷ ಪ್ರತಿ ಅರ್ಜಿಗೆ) |